# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ತಿಪಟೂರು

## ಸಿ.ಸಿ ನಂ. 5/2019

ಚಾಸಾಃ 2
ಫ್ರಾಸಾಃ 4

**ದಿನಾಂಕಃ 04-08-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ರಾಮೇಗೌಡ |
| ತಂದೆಯ/ಗಂಡನ ಹೆಸರು | ಃ | ಶಿವಲಿಂಗಪ್ಪ |
| ವಯಸ್ಸು | ಃ | 65 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ ಸ್ಥಳ | ಃ | ಮಲ್ಲಿಪಟ್ಟಣ, ತಿಪಟೂರು ತಾಃ |

**ಮುಖ್ಯ ವಿಚಾರಣೆ ಎಪಿಪಿಯವರಿಂದಃ**

ದಿಃ 14-12-2018 ರಂದು ಕರಡಿ ಗ್ರಾಮದ 206 ರಸ್ತೆಯ ಪಕ್ಕದಲ್ಲಿ ಇರುವ ಅನೀಲ್ ಕುಮಾರ್ ಚಾಸಾ-1 ರವರ ಮನೆ ಇದ್ದು ಪೊಲೀಸರು ಸದರಿ ಮನೆಯಲ್ಲಿ ಒಂದು ಬೈಕು ಕಳುವಾಗಿರುವ ಬಗ್ಗೆ ಪಂಚನಾಮೆ ಮಾಡಲೆಂದು ನನಗೆ ಕೇಳಿಕೊಂಡಿದ್ದು ನಾನು ಪಂಚನಾಮೆಗೆ ಸಹಕರಿಸಿರುತ್ತೇನೆ. ಪೊಲೀಸರು ಸದರಿ ಸ್ಥಳದಲ್ಲಿ ಬೆಳಗ್ಗೆ 10-30 ಗಂಟೆಯಿಂದ 11 ಗಂಟೆ ತನಕ ನನ್ನ ಸಮಕ್ಷಮ ಸ್ಥಳ ಮಹಜರನ್ನು ಮಾಡಿರುತ್ತಾರೆ. ಸಾಕ್ಷಿಯು ಮಹಜರನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನನ್ನ ಜೊತೆ ಕಾಂತರಾಜು, ಅನೀಲ್ ಕುಮಾರ್ ಸಹಿ ವಾಡಿರುತ್ತಾರೆ.

**ಪಾಟೀ ಸವಾಲು ಶ್ರೀ ಜಿ ಎನ್ ವಕೀಲರಿರಿಂದಃ**

ಮಹಜರ್ ಗೆ ಸಹಕರಿಸಲು ನನಗೆ ಮುಂಚಿತವಾಗಿ ನೋಟೀಸು ಕೊಟ್ಟಿರುವುದಿಲ್ಲ. ಮಹಜರ್ ಮಾಡುವ ಮೊದಲು ಎಷ್ಟು ದಿನದ ಹಿಂದೆ ವಾಹನ ಕಜಳುವಾಗಿರುತ್ತದೆಂದು ನನಗೆ ಹೇಳಲಾಗುವುದಿಲ್ಲ. ನಾನು ಮತ್ತು ಚಾಸಾ-1, 3 ಮತ್ತು 4 ವಿಶ್ವಾಸ ಎಂದರೆ ಸರಿ. ಮಹಜರ್

ನ ಚೆಕ್ಕುಬಂಧಿ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಎಸ್ ಎಸ್ ಎಲ್ ಸಿ ತನಕ ವಿದ್ಯಾಭ್ಯಾಸ ಮಾಡಿರುತ್ತೇನೆ. ನಿಪಿ-2 ಮಹಜರ್ ನಲ್ಲ ಬರೆದಿರುವ ವಿಷಯ ನನಗೆ ಗೊತ್ತು. ನಾನು ಆಗಾಗ ಪೊಲೀಸ್ ಠಾಣೆಗೆ ಬಂದು ಹೋಗುತ್ತಿರುತ್ತೇನೆ ನನಗೆ ಎಲ್ಲಾ ಪೊಲೀಸರು ಪರಿಚಯ. ನಾನು ಠಾಣೆಯಲ್ಲಿ ನಿಪಿ-2 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ
## ತಿಪಟೂರು

**ಸಿ.ಸಿ ನಂ. 5/2019**

ಚಾಸಾಃ 5
ಪ್ರಾಸಾಃ 5

**ದಿನಾಂಕಃ 04-08-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ರಾಜ |
| ತಂದೆಯ/ಗಂಡನ ಹೆಸರು | ಃ | ಮುನಿರಯ್ಯ |
| ವಯಸ್ಸು | ಃ | 35 ವರ್ಷ |
| ಉದ್ಯೋಗ | ಃ | ಕೂಲಿ ಕೆಲಸ |
| ವಾಸ ಸ್ಥಳ | ಃ | ಕರಡಿ |

**ಮುಖ್ಯ ವಿಚಾರಣೆ ಎಪಿಪಿಯವರಿಂದಃ**

ದಿಃ 02-12-2018 ರಂದು ಮಧ್ಯಾಹ್ನ ಸಮಯದಲ್ಲಿ ಒಂದು ದಾಖಲೆಯ ಮೇಲೆ ಸಹಿ ಮಾಡಿರುತ್ತೇನೆ ಅದರಲ್ಲಿರುವ ವಿಷಯ ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ಸದರಿ ದಾಖಲೆಯ ಮೇಲೆ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದು ಮಹಜರ್ ಆಗಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವ ಕಾರಣ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲು ಸರ್ಕಾರಿ ಅಭಿಯೋಜಕರವರಿಂದಃ**

ದಿಃ 13-12-2018 ರಂದ ಮಧ್ಯಾಹ್ನ 3-30 ರಿಂದ 4 ಗಂಟೆವರೆಗೆ ಕಳ್ಳತನಕ್ಕೆ ಸಂಬಂಧಿಸಿ ಪೊಲೀಸರು ಈ ಪ್ರಕರಣದ ಆರೋಪಿತರಾದ ಉದಯಕುಮಾರ್ ಮತ್ತು ಶಫೀಯುಲ್ಲಾ

ರವರು ತೋರಿಸಿರುವ ಸ್ಥಳ ಅಂದರೆ ಕರಡಿ ಗ್ರಾಮದ ಎನ್ ಹೆಚ್ 206 ರಸ್ತೆಯ ಪಕ್ಕದದಲ್ಲಿರು ಅನೀಲ್ ಕುಮಾರ್ ರವರ ವಾಸದ ಮನೆ ಬಳಿ ಕೆಎ-44-ಎಲ್-472 ಹಿರೋ ಸ್ಲೆಂಡರ್ ಕಳುವಾಗಿರುವ ಬಗ್ಗೆ ಸಂಬಂಧಿಸಿ ನನ್ನ ಸಮಕ್ಷಮ ಸ್ಥಳ ಮಹಜರ್ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ವಿಷಯ ತಿಳಿದು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಇರುವುದಿಲ್ಲ**

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.